**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ**
**ಬೆಂಗಳೂರು – 560 001**

ಸಂಖ್ಯೆ:ಸಿ8[4]ಶಾಶಿಅ ಹೊಶಾಅನು/04/2015–16 ದಿನಾಂಕ:16.01.2016

ನಮೂನೆ–2
[ನಿಯಮ 3 ಉಪನಿಯಮ 5(ಬಿ)]
**ಪ್ರಮಾಣ ಪತ್ರ ಸಂಖ್ಯೆ: 81/2015–16**

**ಶ್ರೀ ದೇವರಾಜ್ ಅರಸ್ ಎಜುಕೇಷನ್ ಸೊಸೈಟಿ (ರಿ), ಚಿತ್ರದುರ್ಗ** ಇವರ ಗೌವರ್ನಿಂಗ್ ಕೌನ್ಸಿಲ್‌ನ ಈ ಶಿಕ್ಷಣ ಸಂಸ್ಥೆಯ ಹೊಸ ಪ್ರೌಢಶಾಲೆಯನ್ನು ಕರ್ನಾಟಕ ಶಿಕ್ಷಣ ಕಾಯ್ದೆ 1983 [ಕರ್ನಾಟಕ ಆಕ್ಟ್ 1995] ಸೆಕ್ಷನ್ 31ರಂತೆ ಈ ಮೇಲೆ ನಮೂದಿಸಿರುವ ಶಿಕ್ಷಣ ಸಂಸ್ಥೆಗೆ 2015–16ನೇ ಸಾಲಿನಿಂದ ಹೊಸ ಆಂಗ್ಲ ಮಾಧ್ಯಮ ಪ್ರೌಢಶಾಲೆ ಪ್ರಾರಂಭಿಸಲು ಮಂಜೂರಾತಿ ನೀಡಿ ನೋಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

| | |
|---|---|
| 1. ಕ್ರಮ ಸಂಖ್ಯೆ | : **81/2015–16** |
| **2. ಶಾಲೆಯ ಹೆಸರು ಮತ್ತು ವಿಳಾಸ** | : **ಶ್ರೀ ನೀಲಕಂಠಯ್ಯ ಮೆಮೋರಿಯಲ್ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಒನಕೆ ಓಬವ್ವ ಸ್ಟೇಡಿಯಂ ಹಿಂಭಾಗ, ಚಿತ್ರದುರ್ಗ** |
| 3. ಅನುಮತಿ ನೀಡಿದ ತರಗತಿ | : 9ನೇ ತರಗತಿ, 10ನೇ ತರಗತಿ |
| 4. ಪ್ರಾರಂಭಿಸಬೇಕಾದ ತರಗತಿಗಳು | : 9ನೇ ತರಗತಿ, 10ನೇ ತರಗತಿ. [ಶಾಶ್ವತ ಅನುದಾನ ರಹಿತವಾಗಿ] |
| 5. ಶೈಕ್ಷಣಿಕ ವರ್ಷ | : 2015–16 2016–17 |
| 6. ಅನುಮತಿ ನೀಡಿದ ಮಾಧ್ಯಮ | : ಆಂಗ್ಲ ಮಾಧ್ಯಮ |
| 7. ಶುಲ್ಕ ಪಾವತಿ ಮಾಡಿರುವುದು | : ರೂ. 100000/– ಡಿಡಿ ಸಂಖ್ಯೆ: 470277 ದಿನಾಂಕ.10.12.2015<br>ರೂ.20000/– ಡಿಡಿ ಸಂಖ್ಯೆ: 512904 ದಿನಾಂಕ: 29.10.2015 |

**ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ: 81/2015–16 ಪುಟ ಸಂಖ್ಯೆ: 220 ವಾಲ್ಯೂಂ ಸಂಖ್ಯೆ:09 ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೋಂದಾಯಿಸಲಾಗಿದೆ.**

1. ಈ ನೋಂದಾವಣೆಯು ನಿಯಮ 3[5][4]ಕ್ಕೆ ಒಳಪಟ್ಟಿರುತ್ತದೆ.
2. ಗೌವರ್ನಿಂಗ್ ಕೌನ್ಸಿಲ್ ಇವರು ನಿಯಮ 4[4]ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
3. ಶಾಲಾ ನಿವೇಶನ, ವಿಸ್ತೀರ್ಣ, ಕಟ್ಟಡ, ಪೀಠೋಪಕರಣಗಳು, ಸಿಬ್ಬಂದಿ ವರ್ಗ ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
4. ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.
5. ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
6. ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು.
7. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ, ಜಾರಿಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸುವ ಎಲ್ಲಾ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ 1983 [ಕರ್ನಾಟಕ ಆಕ್ಟ್ ಸಂಖ್ಯೆ:1:96] ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅದರಡಿಯಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.
8. ಈ ಪ್ರೌಢಶಾಲಾ ನೋಂದಾವಣೆಯಂತೆ ಸರ್ಕಾರಿ ಅಧಿಸೂಚನೆ ಸಂ:ಇಡಿ:175:ಪಿಎಂಸಿ:95, ದಿ:07–09–1998 ಮತ್ತು ದಿ:29–12–1998ರ ಪ್ರಕಾರ ಶಾಶ್ವತ ಅನುದಾನ ರಹಿತವಾಗಿರುತ್ತದೆ. ಆಡಳಿತ ಮಂಡಳಿಯು ಸರ್ಕಾರದಿಂದ ಯಾವುದೇ ಅನುದಾನವನ್ನು ಬಯಸುವುದಿಲ್ಲವೆಂದು ರೂ. 10–00 ಛಾಪಾ ಕಾಗದಲ್ಲಿ ನೋಟರಿಯವರ ಮುಂದೆ ಪ್ರಮಾಣೀಕರಿಸಿದ ಒಪ್ಪಿಗೆ ಪತ್ರವನ್ನು ನೀಡುವುದು.
9. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳು [ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ, ಸೇವಾ ಷರತ್ತು ಮತ್ತು ನಿಬಂಧನೆಗಳು] ನಿಯಮ 1999ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.
10. ಇಲಾಖೆ ಹಾಗೂ ಸರ್ಕಾರ ನಿಗದಿಪಡಿಸಿದ ಪಠ್ಯಪುಸ್ತಕ, ಪರೀಕ್ಷಾ ಕ್ರಮಗಳನ್ನು ಮಾತ್ರ ತಪ್ಪದೇ ಅಳವಡಿಸತಕ್ಕದ್ದು.

11. ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ನಿಯಮಾನುಸಾರ ಇರತಕ್ಕದ್ದು, ಪ್ರತಿ ತರಗತಿಯಲ್ಲಿ ಕನಿಷ್ಠ ಹಾಜರಾತಿ 25 ಇರತಕ್ಕದ್ದು.
12. ತರಬೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಿಸತಕ್ಕದ್ದು.
13. ಕರ್ನಾಟಕ ಶಿಕ್ಷಣ ಮಸೂದೆ ಅನುಚ್ಛೇದ 8ರ ಅಡಿಯಲ್ಲಿ ಉಪಬಂಧ 36-39ರಂತೆ ನೋಂದಾಯಿಸಿದ ಎಲ್ಲಾ ಶಾಲೆಗಳ ಮಾನ್ಯತೆ ಹಾಗೂ ತಾತ್ಕಾಲಿಕ ಮಾನ್ಯತೆ ವ್ಯಾಪ್ತಿಗೆ ಬರುವುದು.
14. ಪ್ರತಿ ವರ್ಷವು ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.
15. ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ಭದ್ರತಾ ಠೇವಣಿಯನ್ನು ಜಿಲ್ಲಾ ಉಪನಿರ್ದೇಶಕರು ಹಾಗೂ ಆಡಳಿತ ಮಂಡಳಿಯ ಜಂಟಿ ಖಾತೆಯಲ್ಲಿ ಇರಿಸತಕ್ಕದ್ದು.
16. ಕರ್ನಾಟಕ ಶಿಕ್ಷಣ ಮಸೂದೆ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ ಪುಸ್ತಕಗಳು, ಆಟದ ಮೈದಾನ, ಶಾಲಾ ಕಟ್ಟಡ ಮುಂತಾದ ಸೌಲಭ್ಯಗಳನ್ನು ಒಂದು ವರ್ಷದಲ್ಲಿ ಒದಗಿಸಿಕೊಳ್ಳತಕ್ಕದ್ದು, ಇಲ್ಲದಿದ್ದಲ್ಲಿ ನೋಂದಣಿಯನ್ನು ರದ್ದುಗೊಳಿಸಲಾಗುವುದು.
17. ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೋಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭದ ಮೂರು ತಿಂಗಳ ಒಳಗಾಗಿ ಈ ಕಛೇರಿಗೆ ತಿಳಿಸಬೇಕು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತಾನಾಗೇ ರದ್ದಾಗುವುದು.
18. ಶಾಲೆಯಲ್ಲಿ ಹೆಣ್ಣು ಮಕ್ಕಳಿಗೆ ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕವಾದ ಶೌಚಾಲಯದ ವ್ಯವಸ್ಥೆಯನ್ನು ಕಡ್ಡಾಯವಾಗಿ ಒದಗಿಸಬೇಕು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಬೇಕು.
19. ಪ್ರಥಮ ಮಾನ್ಯತೆಗಾಗಿ ಉಪನಿರ್ದೇಶಕರಿಗೆ ಪ್ರಸ್ತಾವನೆ ಸಲ್ಲಿಸುವುದು. ಉಪನಿರ್ದೇಶಕರು ಶಿಕ್ಷಣ ಕಾಯ್ದೆ ಮತ್ತು ಸರ್ಕಾರದ ಆದೇಶ ದಿನಾಂಕ:30-09-2007ರ ಅನುಬಂಧ-3ರ ಚೆಕ್‌ಲಿಸ್ಟ್‌ನಲ್ಲಿ ಮಾಹಿತಿ ಪಡೆದು ಈ ಆಧಾರದ ಮೇಲೆ ಶಾಲೆ ಪ್ರಾರಂಭಿಸಿದ ಮೂರು ತಿಂಗಳೊಳಗೆ ಕಡ್ಡಾಯವಾಗಿ ಪ್ರಥಮ ಮಾನ್ಯತೆ ನೀಡುವುದು. ನಿಗದಿತ ಅವಧಿಯೊಳಗೆ ಮಾನ್ಯತೆ ಪಡೆಯದಿದ್ದಲ್ಲಿ ನೋಂದಣಿ ತಂತಾನೆ ರದ್ದಾಗುತ್ತದೆ.
20. ಶಾಲೆಯ ಕಟ್ಟಡ ಸುರಕ್ಷತೆಯ ಬಗ್ಗೆ ಬೆಂಕಿ ಬಿರುಗಾಳಿ ವಿದ್ಯುತ್. ಅಪಘಾತ ಮುಂತಾದ ಅಪಘಾತಗಳಿಂದ ಸುರಕ್ಷಿತವಾಗಿರುವ ಬಗ್ಗೆ ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು.
21. ಶಾಲಾ ಆವರಣದ 100 ಗಜಗಳ ಅಂತರದಲ್ಲಿ ತಂಬಾಕು ಉತ್ಪನ್ನಗಳ ಮಾರಾಟವನ್ನು ನಿಷೇಧಿಸಿದೆ ಎಂದು ಶಾಲಾ ಮುಂಭಾಗದಲ್ಲಿ ಪ್ರಕಟಣೆ ನೀಡುವುದು.
22. ಶಾಲಾ ಆಡಳಿತ ಮಂಡಳಿ ಯಾವುದೇ ತಪ್ಪು ಮಾಹಿತಿಗಳನ್ನು ನೀಡಿದ್ದಲ್ಲಿ, ನೋಂದಣಿಯನ್ನು ರದ್ದುಪಡಿಸುವ ಅಧಿಕಾರ ಇಲಾಖೆ ಕಾಯ್ದಿರಿಸಿಕೊಂಡಿದೆ.
23. ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 369 ಪಿ.ಜಿ.ಸಿ 2014, ದಿನಾಂಕ: 11.11.2014ರಂತೆ ಮತ್ತು ಈ ಕಛೇರಿ ಸುತ್ತೋಲೆ ದಿನಾಂಕ: 14.11.2014 ರಂತೆ ಷರತ್ತುಗಳನ್ನು ಪಾಲಿಸಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು

21/1/16

[ಕೆ.ಎಸ್.ಸತ್ಯಮೂರ್ತಿ]
ಆಯುಕ್ತರು
ಹಾಗೂ ನೋಂದಣಿ ಅಧಿಕಾರಿಗಳು
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ:

1. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿತ್ರದುರ್ಗ ಜಿಲ್ಲೆ.
2. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ.
3. ಕಾರ್ಯದರ್ಶಿಗಳು, ಶ್ರೀ ದೇವರಾಜ್ ಅರಸ್ ಎಜುಕೇಷನ್ ಸೊಸೈಟಿ (ರಿ), ಚಿತ್ರದುರ್ಗ
4. ಕಛೇರಿ ಪ್ರತಿ.

\\10.96.135.22\e\d\est2\mysore new memo.doc